# ಶಾಸ್ತ್ರಸರಣಿ ದಾಸವಾಣಿ
# ಭಾಗ-೩

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಬ್ರಹ್ಮಸೂತ್ರ, ಉಪನಿಷತ್ ಮತ್ತು ಗೀತಾ ಈ ಪ್ರಸ್ಥಾನತ್ರಯಗಳಿಗೆ ರಚಿಸಿದ ಭಾಷ್ಯಗಳಲ್ಲಿ ವಿಪುಲ ಶೃತಿ, ಸ್ಮೃತಿ, ಪ್ರಮಾಣ ವಚನಗಳಿಂದ ವಿಷ್ಣು ಸರ್ವೋತ್ತಮತ್ವ ಸಾಧನೆಯನ್ನು ಸರ್ವೋತ್ಕೃಷ್ಟ ರೀತಿಯಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಈ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಮಾತ್ರವಲ್ಲ, ಅವರು ರಚಿಸಿದ ಪ್ರಕರಣ ಗ್ರಂಥವಾಗಲಿ, ಸ್ತೋತ್ರ ಗ್ರಂಥವಾಗಲಿ, ಋಗಾದಿ, ಭಾರತಾದಿ ಗ್ರಂಥಗಳಲ್ಲೂ ವಿಷ್ಣುಸರ್ವೋತ್ತಮನೆಂಬ ವಿಷಯ ಸ್ಫುಟವಾಗಿ ತೋರಿಸಿದ್ದಾರೆ. ಅವರ ಬರಹ ಭಾಷೆ ಸಂಸ್ಕೃತ. ನಿರ್ದುಷ್ಟ ಪದ ಪ್ರಯೋಗ, ನಿಯಮಿತ ಪದ ಪ್ರಯೋಗ, ಅರ್ಥಗಾಂಭೀರ್ಯ ಇತ್ಯಾದಿಗಳ ಬಗ್ಗೆ ಸುಮಧ್ವ ವಿಜಯದಲ್ಲಿ "**ಅಸ್ತದೂಷಣ ಮವಂಧ್ಯ ಭಾಷಣಂ ಲಕ್ಷಿತಂ ಸಕಲ ಲಕ್ಷಣೈ ಸಮಂ**" ಎಂಬ ಸುಂದರ ವರ್ಣನೆಯಿದೆ. ಪರಂಪರಾ ಅಧ್ಯಯನ ಮಾರ್ಗದಲ್ಲಿ ಬಂದ ಗುರುಗಳಿಂದ ಟೀಕಾ, ಟಿಪ್ಪಣಿಗಳ ಸಹಾಯದಿಂದ ವ್ಯವಸಾಯ ಮಾಡಿದರೆ ಪರಮ ಗುರು ಕಾರುಣ್ಯದಿಂದ ತತ್ವ ತಿಳಿಯಲು ಸಾಧ್ಯ.

ಶ್ರೀವಿಷ್ಣುವು ಸಕಲ ಚೇತನರಾಶಿಗಳಿಂದ ಅತ್ಯಂತ ಭಿನ್ನನೂ ಮತ್ತು ಸರ್ವೋತ್ತಮನೂ ಆಗಿದ್ದಾನೆ. ಚೇತನರು ಏನೇ ಪ್ರಯತ್ನ ಮಾಡಿದಾಗ್ಯೂ ಯಾವ ಕಾಲಕ್ಕೂ ಅವನಿಗೆ ಸಮರಾಗಲಾರರು. ಅಧಿಕವಂತೂ ಶಕ್ಯವೇ ಇಲ್ಲ.

ಅವನನ್ನು ಅನುಸರಿಸಿದರೆ ಮಾತ್ರ ಒಂದಿಲ್ಲೊಂದು ದಿನ ದಯಮಾಡಿ ಈ ಚೇತನರ ದುಃಖ ನಿವೃತ್ತಿಮಾಡಿ ಅತ್ಯಂತಿಕ

ಸುಖವನ್ನು ಕೊಟ್ಟಾನು. ಪ್ರತಿ ಸ್ಪರ್ಧಿಸಿದರೆ, ಅವನಿಗೆ ಎದುರಾಗಿ ನಿಲ್ಲಲು ಯಾರಿಗೂ ಯಾವ ಕಾಲಕ್ಕೂ ಸಾಧ್ಯವಿಲ್ಲ. ಅವನು ಸರ್ವತಂತ್ರ, ಸ್ವತಂತ್ರ ಮತ್ತು ಸೃಷ್ಟ್ಯಾದಿ ಕೆಲಸಗಳನ್ನು ಹಂಚಿಕೊಟ್ಟಿದ್ದಾನೆ. ಆದರೂ ಅವನ ಅಧೀನಕ್ಕೊಳಪಟ್ಟು ಕೆಲಸ, ಉಳಿದವರಿಗೆ ಅದೂ ಇಲ್ಲ.

"ಸ್ವಾಮಿಯಂತೆ ಬಂಟನೋ", ರಾಮರಿಗೆ ತಕ್ಕ ಬಂಟರೆಂದರೆ ಹನುಮರು. ಹಾಗೆಯೇ ವೇದವ್ಯಾಸರಿಗೆ ತಕ್ಕ ಬಂಟರು ಮಧ್ವರು, ಮಧ್ವರಿಗೆ ತಕ್ಕ ಬಂಟರು ಸಂಸ್ಕೃತ ವಾಙ್ಮಯದಲ್ಲಿ ಪದ್ಮನಾಭತೀರ್ಥ, ಜಯತೀರ್ಥಾದಿ ಪ್ರಭೃತಿಗಳು, ಪ್ರಾಕೃತ ವಾಙ್ಮಯದಲ್ಲಿ ಬಂಟರೆಂದರೆ ಪುರಂದರದಾಸ, ವಿಜಯದಾಸಾದಿ ಮಹನೀಯರು.

ಶ್ರೀವಿಷ್ಣು ಸರ್ವೋತ್ತಮತ್ವ ತತ್ವವನ್ನು ದಾಸರಾಯರು ಸ್ಮೃತಿ ದೃಷ್ಟಾಂತಗಳಿಂದ ಉಪಪಾದನೆ ಮಾಡಿದ್ದಾರೆ. ಈ ಯುಕ್ತ್ಯಾನುಸಂಧಾನ ವಿದ್ವಾಂಸರಿಗೂ ಅಧಿಕ ದಾರ್ಢ್ಯ ಮತ್ತು ಅಧಿಕ ಸ್ಪಷ್ಟತೆಗೊಳಿಸಿ ಮನನ ಶೀಲರಾಗಲು ಅನುಕೂಲ ಪದಗಳು ಬೇಗನೇ ಮುಖೋದ್ಗತವಾಗಿ ಬಿಡುತ್ತವೆ. ಬಾಲಸಂಘಕ್ಕೆ ಅನಾಯಾಸವಾಗಿ ಬುಧ್ಯಾರೂಢವಾಗುವಂತೆ ಸಮರ್ಥನೆ ಮಾಡಿದ್ದಾರೆ. ಶೃತಿ, ಸ್ಮೃತಿಗಳಲ್ಲಿ ಭಿನ್ನಭಿನ್ನ ಸಂದರ್ಭಗಳಲ್ಲಿ ಲಕ್ಷ್ಮೀ, ಬ್ರಹ್ಮ, ರುದ್ರ ಪರವಚನಗಳು ಇವೆ. ಇವರು ಸರ್ವೋತ್ತಮರೆಂಬ ಅನುಮಾನ ಬಂದರೆ ಅವುಗಳನ್ನು ಪರಿಹಾರ ಮಾಡಿ ಚಮತ್ಕಾರ ಯುಕ್ತಿಗಳಿಂದ, ವಿಷ್ಣು ಒಬ್ಬನನ್ನು ಬಿಟ್ಟರೆ ಇತರ ದೇವತೆಗಳಲ್ಲಿ ಸರ್ವೋತ್ತಮತ್ವವು ಸರ್ವಥಾ ಕೂಡುವುದಿಲ್ಲವೆಂದು ಅತ್ಯುತ್ತಮವಾಗಿ ಸಾಧಿಸಿದ್ದಾರೆ. ಬ್ರಹ್ಮಸೂತ್ರ ಪ್ರಥಮಾಧ್ಯಾಯ ಸಮನ್ವಯಾಧ್ಯಾಯವೆಂದು. ಈ ಸಮಗ್ರ ಅಧ್ಯಾಯದಲ್ಲಿ ಸಕಲ ವರ್ಣಾತ್ಮಕ, ಧ್ಯಾನಾತ್ಮಕ

ಶಬ್ದಗಳು ವಿಷ್ಣುವಿನಲ್ಲಿಯೇ ಸಮನ್ವಯವಾಗುವವೆಂದೂ, ಅನ್ಯಪರವಲ್ಲವೆಂದೂ ಭಾಷ್ಯಕಾರರು ಪ್ರತಿಪಾದನೆ ಮಾಡಿದ್ದಾರೆ.

ಈ ವಿಷಯದಲ್ಲಿ ನೋಡುವಾ ದಾಸರಾಯರ ಒಂದು ಕೃತಿ
**ಅಂದೇನಿರ್ಣಯವಾದುದಕೆ|ಸಿರಿ|**
**ಇಂದಿರಾಪತಿ ಪರದೈವವೆಂದೂ||ಪ||**

ಬಹಳಕಾಲದ ಹಿಂದೆಯೇ ಇಂದಿರಾಪತಿ, ಸಾಕ್ಷಾತ್ ವಿಷ್ಣುವು ಸರ್ವೋತ್ತಮನೆಂದು ನಿರ್ಧಾರವಾಗಿ ಹೋಗಿದೆ. ಇದು ನಿಮಗೆ ತಿಳಿಯದೇ. ಇಲ್ಲ ಬಿಡ್ರಿ ದಾಸರೇ, ದೇವಲೋಕದ ಸಮಾಚಾರ ನಮ್ಮ ಪತ್ರಿಕೆಗಳಲ್ಲಿ ಬರುವುದೇ ಇಲ್ಲ, ನಮಗೆ ಗೊತ್ತಾಗುವ ಬಗೆ ಹೇಗೆ? ತ್ರಿಲೋಕ ಸಂಚಾರಿಗಳಾದ ತಾವು ಬಂದಾಗಲೇ ಆ ಪರಲೋಕಗಳ ವಾರ್ತೆ ನಮಗೆ ಗೊತ್ತಾಗುವದು. ಏನಾಯ್ತು ಹೇಳೋಣವಾಗಲಿ. ಎಲ್ಲ ದೇವತೆಗಳೂ ಇದ್ದರೆ? ದೈತ್ಯರ ಅಭಿಪ್ರಾಯವೇನು?

**ಅಂದು ಸ್ವಯಂವರದಲಿ ಬ್ರಹ್ಮರುದ್ರಾದಿ|ಇಂದ್ರಾದಿಗಳೆಲ್ಲರ ಜರೆದು||**
**ಇಂದಿರೆ ನಿತ್ಯಾನಂದ ನಿರ್ದೋಷ ಗುಣಪೂರ್ಣ|**
**ನೆಂದು ಮಾಲೆಯ ಹಾಕಿದಳು||೧||**

ಅದು ಕ್ಷೀರಸಮುದ್ರ ಮಥನಕಾಲ. ಮಥನ ಮಾಡುತಾ ಅನೇಕ ಪದಾರ್ಥಗಳು ಬಂದವು. ಆ ಮೇಲೆ ಲಕ್ಷ್ಮಿಯೂ ಬಂದಳು. ಅದೇನು ಲೋಕಮೋಹಕ ಆಕರ್ಷಕ ಸುಂದರ ರೂಪ. ಆಕೆ ಬಂದ ಕೂಡಲೇ ಒಬ್ಬೊಬ್ಬ ದೇವತೆಗಳು ಒಂದೊಂದು ಉಡುಗರೆ ಕೊಟ್ಟು ಉಪಚಾರ ಮಾಡಿದರು. ದೇವೇಂದ್ರನು

ಆಸನ, ಸರಸ್ವತಿ ವೈಜಯಂತಿ ಮಾಲೆ, ಸಮುದ್ರರಾಜ ನೀಲಿ ಸೀರೆ, ಇತ್ಯಾದಿಗಳನ್ನು ಕೊಟ್ಟರು. ಲಕ್ಷ್ಮೀದೇವಿಯು ಮಾಲೆಯನ್ನು ಹಿಡಿದುಕೊಂಡು ದೇವದೈತ್ಯರ ಸಮೂಹದಲ್ಲಿ ಹೊರಟಳು. ಸ್ವಯಂವರ ಪ್ರಾರಂಭವಾಯಿತು. ದೇವದೈತ್ಯರು ಎರಡು ಸಾಲಾಗಿ ನಿಂತರು. ಪ್ರತಿಯೊಬ್ಬರೂ ತಮಗೆ ಒಂದು ಅವಕಾಶ (Chance) ಇದೆ ಎಂಬ ಆಶೆಯಿಂದ, ಬೆವರು ಒರೆಸಿಕೊಂಡು, ಉಡುಪುಗಳನ್ನು ಸಾವರಿಸಿಕೊಂಡು ಲಕ್ಷ್ಮೀ ಆಗಮನವನ್ನು ನಿರೀಕ್ಷಿಸುತ್ತಾ ಹಸನ್ಮುಖರಾಗಿ ನಿಂತರು. ಲಕ್ಷ್ಮೀದೇವಿಯು ಪ್ರತಿಯೊಬ್ಬ ದೇವತೆಯಲ್ಲೂ ಒಂದೊಂದು ದೋಷವನ್ನು ತೋರಿಸಿದಳು. ದೈತ್ಯರ ಕಡೆಗೊಂತು ನೋಡಲೇ ಇಲ್ಲ. ಎಲ್ಲರೂ ನೋಡನೋಡುತ್ತಲೇ ವಿಷ್ಣುವು ನಿತ್ಯಾನಂದ, ನಿರ್ದೋಷ ಮತ್ತು ಗುಣಪೂರ್ಣನೆಂದು ಮಾಲೆ ಹಾಕಿದಳು. ಬ್ರಹ್ಮರುದ್ರಾದಿಗಳಿಗಿಂತಲೂ ಮತ್ತು ಲಕ್ಷ್ಮೀಗಿಂತಲೂ ವಿಷ್ಣು ಉತ್ತಮನೆಂದು ನಿರ್ವಿವಾದವಾಯಿತು.

ಎರಡನೆಯದಾಗಿ ಪ್ರಪಂಚ ಸೃಷ್ಟಿ ಮಾಡಿದ್ದಾನೆಂದು ಪ್ರಸಿದ್ಧಿಯುಳ್ಳ ಚತುರ್ಮುಖ ಬ್ರಹ್ಮ ಸರ್ವೋತ್ತಮ ದೇವತೆ ಏನೋ ಎಂಬ ಸಂದೇಹ ಬಂದರೆ. ಭಾಗವತ ದೃಷ್ಟಾಂತದಿಂದ ಪರಿಹಾರ ಮಾಡುತ್ತಾರೆ.

**ಸರಸಿಜೋದ್ಭವ ಪಾದವ ತೊಳೆಯಲು**
**ಹರಭಕ್ತಿಯಿಂದ ಹರಿಪಾದ ತೀರ್ಥವ||**
**ಹರುಷದಿ ಸುರಮುನಿಗಳೆಲ್ಲರ ಮುಂದೆ|**
**ಧರಿಸಿದನೆಂದು ಶಿರಸ್ಸಿನಲಿ||೨||**

ಬ್ರಹ್ಮದೇವರು ವಿಷ್ಣು ಪಾದಗಳನ್ನು ತೊಳೆದರು. ಬ್ರಹ್ಮ ದೇವರು, ರುದ್ರ ದೇವರು ಮತ್ತು ಇನ್ನಿತರ ದೇವತೆಗಳು,

ಮುನಿಗಳು ವಿಷ್ಣು ಪಾದೋದಕವನ್ನು ಶಿರಸ್ಸಿನಲ್ಲಿ ಧಾರಣ ಮಾಡಿದರು. ದೇವತೆಗಳಲ್ಲಿ ಚತುರ್ಮುಖ ಬ್ರಹ್ಮ ದೇವನೇ ಹಿರಿಯ. ಅವನೂ ತನಗೊಬ್ಬ ಹಿರಿಯನಿದ್ದಾನೆಂದು ಹೇಳಿದ ಮೇಲೆ ವಿಷ್ಣುವು ಸರ್ವೋತ್ತಮನೆಂದು ಸಾಧಿಸಲು ಬೇರೆ ಏನು ಸಾಧನೆ ಬೇಕು.

ರುದ್ರದೇವರು, ಸಂಹಾರ ಕರ್ತೃಗಳೆಂದು ಲೋಕ ಪ್ರಸಿದ್ಧರು. ಪ್ರಚಂಡ ಶಕ್ತಿ, ಬಹು ಉಗ್ರ ಎಂದು ರುದ್ರ ದೇವರು ಸರ್ವೋತ್ತಮರೋ ಎಂದು ಸಂದೇಹ ಬಂದರೆ, ದಾಸರಾಯರು ಎರಡು ದೃಷ್ಟಾಂತಗಳಿಂದ ಸ್ಪಷ್ಟೀಕರಣ ಮಾಡುತ್ತಾರೆ.

**ವೃಕನೆಂಬಾಸುರಗೆ ಹರವರವನೆ ಕೊಟ್ಟು|**
**ಚಕಿತನಾಗಿ ಓಡಿ ಬಳಲುತಿರೆ||**
**ರುಕುಮಿಣಿಪತಿ ವೃಕಾಸುರನ ಭಸ್ಮವ ಮಾಡಿ|**
**ಭಕುತ ರುದ್ರನೆಂದು ಪಾಲಿಸಿದ||೩||**

ವಿಷ್ಣುವಿನಿಂದ ರುದ್ರದೇವನು ಪಾಲಿಸಲ್ಪಟ್ಟ ವಿಷಯ, ಉಪಾಯದಿಂದ ಅಸುರನನ್ನು ಭಸ್ಮ ಮಾಡಿದ ವಿಷಯ ಸ್ಪಷ್ಟವಾಗಿದೆ. ಸರ್ವೋತ್ತಮತ್ವವೂ ಸ್ಪಷ್ಟವಿದೆ.

ಇನ್ನೊಂದು ಸಮಯದಲ್ಲಿ ಸಮುದ್ರ ಮಥನ ಮಾಡಿದಾಗ ಉತ್ಪನ್ನವಾದ ಹಾಲಾಹಲ ವಿಷವನ್ನು ಕುಡಿದ ರುದ್ರದೇವನ ಸ್ಥಿತಿ ಶೋಚನೀಯವಾಯಿತು. ರಾಮನಾಮ ಜಪದಿಂದ ರುದ್ರದೇವ ಮೃತ್ಯುಂಜಯನಾದ. ಹರಿ ಸರ್ವೋತ್ತಮತ್ವವನ್ನು ಸಿದ್ಧಪಡಿಸಿದ.

**ನಾಮತ್ರಯ ಪ್ರಭಾವದಿಂದಲಿ ಬೇಗ|**

**ಸೋಮಧರನು ವಿಷವನು ಧರಿಸಿ||**
**ರಾಮನಾಮವೆಂಬ ಅಮೃತ ಪಾನದಿಂ|**
**ಕಾಮಾರಿತಾ ಮೃತ್ಯುಂಜಯನಾದ||೪||**

ಇನ್ನೊಂದು ಸಂದರ್ಭದಲ್ಲಿ ಕರಿರಾಜನನ್ನು ಸರೋವರದಲ್ಲಿ ಮೊಸಳೆ ಕಾಲು ಹಿಡಿದು ಬಹುಕಾಲ ಹಿಂಸಿಸುತ್ತಿರಲು, ಬಿಡಿಸಿಕೊಳ್ಳಲು ಪ್ರಯತ್ನಪಟ್ಟು ಬಲಹೀನನಾಗಿ, ಕೊನೆಗೆ ಕರಿರಾಜನು ಹೇ! ಆದಿಮೂಲ ರಕ್ಷಿಸು ಎಂದು ಮೊರೆಯಿಟ್ಟನು. ಆಗ ದೇವತೆಗಳು ಆ ಆರ್ತರವವನ್ನು ಕೇಳಿಸಿಕೊಂಡರೂ ಕರಿರಾಜನು ಕರೆಯತಕ್ಕ ವ್ಯಕ್ತಿಗಳು ತಾವಲ್ಲವೆಂದು ಸುಮ್ಮನೆ ಇದ್ದುಬಿಟ್ಟರು.

**ಕರಿ ಆದಿಮೂಲಗೆ ಮೊರೆಯಿಡುವದು ಕೇಳಿ|**
**ಸುರರು ತಾವಲ್ಲವೆಂದು ಸುಮ್ಮನಿರಲು||**
**ಗರುಡನ ಪೆಗಲೇರಿ ಹರಿ ಬೇಗನೆ ಬಂದು|**
**ಕರಿಯ ನಾಪತ್ತಿನಿಂದ ಬಿಡಿಸಿದನು||೫||**

ಆದಿಮೂಲನೆಂಬ ನಾಮ ವಿಷ್ಣುವಿನದಾದ್ದರಿಂದ ಆತನೇ ಪ್ರತ್ಯಕ್ಷನಾದನು. ದಾಸರೇ! ಸುರರೆಲ್ಲರೂ ಒಪ್ಪಿದಂತಾಯಿತು. ಆದರೆ ಋಷಿ ಮುನಿಗಳ ಅಭಿಪ್ರಾಯವೇನು?

ಅವರ ಅಭಿಪ್ರಾಯವೂ ದೇವತೆಗಳಂತೆಯೇ. ಒಂದು ಸಂದರ್ಭವನ್ನು ಕೇಳಿರಿ, ವಿಷ್ಣು ಸರ್ವೋತ್ತಮತ್ವವನ್ನು ಋಷಿಗಳು ಹೇಗೆ ಸಿದ್ದ ಮಾಡಿದರೆಂದು,

**ಹರಿ ಸಿರಿ ವಿರಿಂಚಿ ಲೋಕಗಳಿಗೆ ಪೋಗಿ|**
**ಹರಿ ಹರ ವಿರಂಚರ ಪರಿಗಳನು||**

**ಹರುಷದಿ ಭೃಗುಮುನಿ ತಿಳಿದು ಬೇಗದಿ ಬಂದು|**
**ಸರಸ್ವತಿ ತೀರದ ಋಷಿಗಳಿಗೊರೆದ||೬||**

ಭೃಗು ಋಷಿಗಳು ಹರಿಸಿರಿ ವಿರಿಂಚಿಗಳ ಲೋಕಗಳಿಗೆ ಹೋಗಿ ಅವರವರ ಪರಿಗಳನ್ನು ವಿಚಾರಿಸಿ, ವಿಷ್ಣುವೇ ಪರದೈವವೆಂದು ನಿಶ್ಚಯಮಾಡಿಕೊಂಡು ಬಂದು ಸರಸ್ವತೀ ತೀರದ ಋಷಿಗಳಿಗೆ ಹೇಳಿದ ಮೇಲೆ ಯಜ್ಞ ಪ್ರಾರಂಭವಾಯಿತು.

ಇದೇ ರೀತಿ ಅನೇಕ, ಸಂದರ್ಭಾನುಸಾರ ಸ್ಮೃತಿ ದೃಷ್ಟಾಂತಗಳಿಂದ ವಿಷ್ಣು ಸರ್ವೋತ್ತಮನೆಂದು ಪ್ರತಿಪಾದನೆ ಮಾಡಿದ್ದಾರೆ. ಇನ್ನೂ ಸಂದೇಹ ಉಳಿದಿದ್ದರೆ-

**ಸಂದೇಹಾತ್ಮಾ ವಿನಶ್ಯತಿ ಎಂದೂ|**
**ಶೃತಿ ವೃಂದಗಳೆಲ್ಲ ಸಾರುತಿರೆ||**
**ಪುರಂದರ ವಿಠಲ ಸರ್ವೋತ್ತಮನೆಂಬಲ್ಲಿ|**
**ಸಂದೇಹನ ಬಿಟ್ಟು ಸ್ತುತಿಸಲೋ ಮನುಜ||೭||**

ಸ್ಮೃತ್ಯುಕ್ತ ಪ್ರಮಾಣಗಳಿಂದ ವಿಷ್ಣು ಸರ್ವೋತ್ತಮನೆಂಬ ನಿಷ್ಕೃಷ್ಟ ಹೇತುಗಳಿರಲು ಸಂದೇಹವನ್ನು ಬಿಟ್ಟು ವಿಷ್ಣುವನ್ನು ಉಪಾಸನೆ ಮಾಡಿ, ಹೇ ಅಧಿಕಾರಿಗಳೇ, ಇಹಪರಗಳಲ್ಲಿ ಆನಂದ ಹೊಂದಿ ಕೊನೆಗೆ ವಿಷ್ಣು ಪ್ರಸಾದ ದ್ವಾರಾ ಮೋಕ್ಷವನ್ನು ಹೊಂದಿರಿ, ಎಂದು ಸುಲಭ ಮಾರ್ಗದಲ್ಲಿ ದಾಸರಾಯರ ತತ್ತ್ವೋಪದೇಶ.